**ದಿನಾಂಕ : 05-08-2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ ಸಿ.ಪಿ.ಡಿ ವಕೀಲರಿಂದ ವಾದಿ ಪರ**

ಮುತ್ತೂರು ಗ್ರಾಮದ ಸರ್ವೆ ನಂ. 94/3 ರಲ್ಲಿ 3 ಎಕರೆ 28 ಗುಂಟೆ ಇರುತ್ತದೆ. ಅದರಲ್ಲಿ ಮೊದಲಿನ ಸರ್ವೆ ನಂ. 5 ಎಕರೆ 2 ಗುಂಟೆ ಇದೆ ಎಂದರೆ ನಿಜ. ಸರ್ವೆ ನಂ. 116 ರಲ್ಲಿ 3 ಎಕರೆ 4 ಗುಂಟೆ ಇತ್ತು ಎಂದರೆ ಸರಿಯಲ್ಲ. 2 ಎಕರೆ 39 ಗುಂಟೆ ಇತ್ತು. ಅದೇ ಗ್ರಾಮದ ಸರ್ವೆ ನಂ. 119/2 ರಲ್ಲಿ 6 ಎಕರೆ 17 ಗುಂಟೆ ಇದೆ ಎಂದರೆ ನಿಜ. ದೂಳಿಕೊಪ್ಪದ ಸರ್ವೆ ನಂ. 33/2 ರಲ್ಲಿ 1 ಎಕರೆ 30 ಗಂಟೆ ಇದೆ ಎಂದರೆ ಸರಿಯಲ್ಲ. ಅದೇ ಗ್ರಾಮದ ಸರ್ವೆ ನಂ. 33/4 ರಲ್ಲಿ 1 ಎಕರೆ 8 ಗುಂಟೆ ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ 5 ಜಮೀನುಗಳು ಮೊದಲು ಮಾಯಪ್ಪನ ಹೆಸರಿಗೆ ಇದ್ದವು ಎಂದರೆ ಸರಿಯಲ್ಲ. ಸಣ್ಣಕರಿಯಪ್ಪ ಮತ್ತು ದೊಡ್ಡಕರಿಯಪ್ಪನ ಜಂಟಿ ಹೆಸರಿನಲ್ಲಿ ಇದ್ದವು. ಈ ಬಗ್ಗೆ ದಾಖಲೆಗಳು ಇವೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವು ಮಾಯಪ್ಪನ ತಂದೆ ಸಣ್ಣಕರಿಯಪ್ಪನ ಹಿಸ್ಸೆಗೆ ಬಂದ ಜಮೀನುಗಳು ಎಂದರೆ ಸರಿಯಲ್ಲ. ಮಾಯಪ್ಪ ತೀರಿಕೊಂಡ ನಂತರ ಮೇಲೆ ಹೇಳಿದ ಆಸ್ತಿಗಳು ಆತನ ಹೆಂಡತಿ ಯಲ್ಲವ್ವನ ಹೇಸರಿಗೆ ಬಂದಿತ್ತು ಎಂದರೆ ಸರಿಯಲ್ಲ. ನಂತರ ಯಲ್ಲವ್ವ ಗುಡ್ಡಪ್ಪನನ್ನು ದತ್ತು ತೆಗೆದುಕೊಂಡ ನಂತರ ಆತನ ಹೆಸರಿಗೆ ಈ ಆಸ್ತಿಗಳನ್ನು ಮಾಡಲು ಹೇಳಿಕೆ ಕೊಟ್ಟು ಆತನ ಹೆಸರಿಗೆ ಮಾಡಿಸಿದಳು ಎಂದರೆ ಸರಿಯಲ್ಲ. ಗುಡ್ಡಪ್ಪ ತೀರಿಕೊಂಡ ನಂತರ ನನ್ನ ತಂದೆ ಮಾಯಪ್ಪನ ಕಾಸ ಮೊಮ್ಮಗ ಈ ದಾವೆಯ ವಾದಿ ಕರಿಯಪ್ಪನ ಹೆಸರಿಗೆ ಮಾಡಲು ನನ್ನ ತಂದೆ ವರದಿ ಕೊಟ್ಟು ಆತನ ಹೆಸರಿಗೆ ಮಾಡಿಸಿದರು ಎಂದರೆ ಸರಿಯಲ್ಲ. ಈ ರೀತಿ 1957 ರಲ್ಲಿ ವಾದಿ ಕರಿಯಪ್ಪನ ಹೆಸರಿಗೆ ಖಾತೆ ಆಗಿದ್ದವು ಆಗ ಆತ ಅಲ್ಪವಹಿ ಇದ್ದ ಎಂದರೆ ಸರಿಯಲ್ಲ. ಕರಿಯಪ್ಪಗೆ ನನ್ನ ತಂದೆ ಕಾಸ ಚಿಕ್ಕಪ್ಪ ಆಗಬೇಕು. ವಾದಿ ಅಲ್ಪವಹಿಗೆ ಆಗ ನನ್ನ ತಂದೆ ಸಂರಕ್ಷಕರಾಗಿದ್ದರು ಎಂದರೆ ಸರಿಯಲ್ಲ. ವಾದಿ ಹಾಜರು ಪಡಿಸಿರುವ ಕಾಗದ ಪತ್ರಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ ಮೇಲೆ ಹೇಳಿದ 5 ಜಮೀನುಗಳು ನಮ್ಮ ಕುಟುಂಬದ ಜಮೀನುಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ವಾದಿ ತಂದೆಯ ಮಧ್ಯೆ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. 1984 ರಲ್ಲಿ ಪಾಲು ವಿಭಾಗ ಆಗಿದ್ದು ಈ ಬಗ್ಗೆ ದಾಖಲೆಗಳು ಇದೆ. ಈ ಬಗ್ಗೆ ಪಾಲು ವಿಭಾಗ ಪತ್ರ ವಾದಿಯ ಬಳಿ ಇದೆ. ನಾನು ಹೇಳಿದಂತೆ ಪಾಲು ವಿಭಾಗ ಪತ್ರ ಆಗಿರುವುದಿಲ್ಲ ಎಂದೆರ ಸರಿಯಲ್ಲ . ಮೇಲೆ ಹೇಳಿದ 5 ಜಮೀನುಗಳ ಪಕ್ಕದಲ್ಲಿ ನಮ್ಮ ಕುಟುಂಬದ ಜಮೀನುಗಳು ಇದ್ದವು ಎಂದರೆ ಸಾಕ್ಷಿಯು ಎಲ್ಲಾ

ಜಮೀನುಗಳು ಒಟ್ಟಿಗೆ ಇರುತ್ತವೆ ಎಂದು ಹೇಳುತ್ತಾರೆ. ಅವು ಒಂದೇ ಕುಟುಂಬದ ಆಸ್ತಿಗಳು ಇರುತ್ತವೆ. ನಾವು 5 ಜಮೀನುಗಳನ್ನು ಅನಧಿಕೃತವಾಗಿ ನಮ್ಮ ಕುಟುಂಬಕ್ಕೆ ಸೇರಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದ 5 ಜಮೀನುಗಳ ಪೈಕಿ ದೂಳಿಕೊಪ್ಪದ ಜಮೀನುಗಳ ಬಗ್ಗೆ 1981 ರಲ್ಲಿ ಮತ್ತು ಮುತ್ತೂರು ಜಮೀನುಗಳ ಬಗ್ಗೆ 1984 ರಲ್ಲಿ ಅನಧಿಕೃತವಾಗಿ ಮುಟೇಶನ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಆ ಎರಡು ಮುಟೇಶನಗಳನ್ನು ವಾದಿ ಎ.ಸಿ ಕಚೇರಿಯಲ್ಲಿ ಪ್ರಶ್ನಿಸಿದ್ದರು. ನಾವು ವಾದಿಗೆ ಏನನ್ನು ತಿಳಿಸದೆ ಮತ್ತು ತಪ್ಪು ತಿಳುವಳಿಕೆ ಕೊಟ್ಟು ವರದಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಡಿ–1 ರಲ್ಲಿ ಬರೆದಿರುವ ವರದಿಯನ್ನು ನಾವು ವಾದಿಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯ 'ಬಿ' ಅನುಸೂಚಿತ ಆಸ್ತಿ ವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಈ ಆಸ್ತಿಗಳ ಮೇಲೆ ನಮಗೆ ಯಾವುದೇ ಹಕ್ಕು ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ–1 ಕಾನೂನುಬದ್ಧ ಹಿಸ್ಸೆ ಅಲ್ಲ ಎಂದರೆ ಸರಿಯಲ್ಲ. 'ಬಿ' ಅನುಸೂಚಿತ ಆಸ್ತಿಗಳನ್ನು ನಮ್ಮ ಕುಟುಂಬದ ಆಸ್ತಿಗಳನ್ನು ಸೇರಿಸಿಕೊಂಡು ನಿಡಿ–1 ನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ವಾದಿಯ ತಂದೆಯ ಒಟ್ಟು ಕುಟುಂಬಕ್ಕೆ 'ಸಿ' ಅನುಸೂಚಿತ ಆಸ್ತಿ ಮಾತ್ರ ಇದ್ದವು ಎಂದರೆ ಸರಿಯಲ್ಲ. 'ಸಿ' ಅನುಸೂಚಿತ ಆಸ್ತಿಯೊಂದಿಗೆ 'ಬಿ' ಅನುಸೂಚಿತ ಆಸ್ತಿಯನ್ನು ಸೇರಿಸಿಕೊಂಡು ಹಿಸ್ಸೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. 'ಬಿ' ಅನುಸೂಚಿತ ಆಸ್ತಿಗಳನ್ನು ನಿಡಿ–1 ನ್ನು ತಯಾರಿಸುವ ಕಾಲಕ್ಕೆ ವಾದಿ ಕರಿಯಪ್ಪನ ಹೇಸರಿಗೆ ಇದ್ದವು ಎಂದರೆ ಸರಿಯಲ್ಲ. 'ಸಿ' ಅನಸೂಚಿತ ಆಸ್ತಿಯಲ್ಲಿ ವಾದಿಗೆ ಅರ್ಧ ಭಾಗ ಇದೆ ಎಂದರೆ ಸರಿಯಲ್ಲ. ನಮ್ಮ ಮತ್ತು ವಾದಿಯ ಮಧ್ಯೆ ಅನುಸೂಚಿತ ಆಸ್ತಿಯಲ್ಲಿ ಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ತಳವಾರ ಕೆಂಚಪ್ಪ ಮತ್ತು ಭೋವಿ ಹೂವಕ್ಕರ ಆಸ್ತಿಗಳನ್ನು ಮಾರುವಾಗ ನಾವು ವಾದಿಯನ್ನು ವಿಚಾರಿಸಿರುವುದಿಲ್ಲ. ಅದರಲ್ಲಿ ವಾದಿಯ ಹಕ್ಕನ್ನು ದಿಕ್ಕರಿಸಿ ಅನಧಿಕೃತವಾಗಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಭಾಗಕ್ಕೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ. ಈಗ ನಮ್ಮ ಮತ್ತು ವಾದಿಯ ಮಧ್ಯೆ ಸಂಬಂಧ ಸರಿ ಇರುವುದಿಲ್ಲ. ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಹಾಕಿರುವ ವ್ಯಾಜ್ಯದ ಆಸ್ತಿಗೂ ಈ ಆಸ್ತಿಗೂ ಸಂಬಂಧ ಇರುತ್ತದೆ. ಆ ವ್ಯಾಜ್ಯದ ಆಸ್ತಿ ಈ ದಾವೆಯಲ್ಲಿ ಸೇರ್ಪಡೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಮೊದಲು ಸೇರಿಸಿದ್ದಿಲ್ಲ ನಂತರ ವಾದಿ ಸೇರಿಸಿದ್ದಾರೆ ಎಂದರೆ ನಿಜ. ಮನೆ ನಂ. 33 ರ ಬಗ್ಗೆ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನಡೆಯುತ್ತಾ ಇದೆ.ನಾವು ದಾಖಲೆಗಳನ್ನು ನೋಡದೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿ ಅನುಸೂಚಿಗಳ ಪೂರ್ವ ಪರ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ ಎಂದರೆ

ಸರಿಯಲ್ಲ. ವಾದಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಧನೆ ಮಾಡುತ್ತಿದ್ದೆವೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೆ.ಸರಿ ಇದೆ.**

**ಸಹಿ/-**

ಹಿರಿಯ ದಿವಾಣಿ ನ್ಯಾಯಾಧೀಶರು

**ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**